# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## **SC No**. 84/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ದೇವರಾಜು** | **PW – 7** |
| ತಂದೆಯ ಹೆಸರು | : | **ರಾಚಪ್ಪ** | **CW – 8** |
| ವಯಸ್ಸು | : | **59 ವರ್ಷ** | |
| ವೃತ್ತಿ | : | **ಕಟಿಂಗ್ ಶಾಪ್ ನಲ್ಲಿ ಕೆಲಸ** | |
| ವಾಸ | : | **ಸೋಮವಾರಪೇಟೆ** | |

**ಸಾಕ್ಷಿಯನ್ನು ದಿನಾಂಕ 09-03-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ**

1. ನನಗೆ ಚಾಸಾ-1 ಮತ್ತು ಫ್ರಾಸಾ-6 ಇವರ ಪರಿಚಯ ಇರುವುದಿಲ್ಲ. ಸುಮಾರು ಒಂದು ವರ್ಷದ ಹಿಂದೆ ಸೋಮವಾರಪೇಟೆಯ ನನ್ನ ಕಟಿಂಗ್ ಶಾಪ್ ನಲ್ಲಿ ಇದ್ದಾಗ ಪೊಲೀಸರು ಪಂಚನಾಮೆಗೆ ಸಹಿ ಪಡೆದುಕೊಂಡಿರುತ್ತಾರೆ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಹಾಗೂ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ. ಪಂಚನಾಮೆಯನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು **ನಿಪಿ-6(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ಪೊಟೋಗಳನ್ನು ನೋಡಿ ಗುರುತಿಸಿದ್ದು, ಪೊಟೋಗಳನ್ನು ಈಗಾಗಲೇ ನಿಪಿ-7 ರಿಂದ ನಿಪಿ-11 ಎಂದು ಗುರುತಿಸಲಾಗಿದೆ. ಪೊಟೋಗಳನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀ ಸವಾಲು- ಸರ್ಕಾರಿ ಅಭಿಯೋಜಕರಿಂದಃ**

1. ದಿನಾಂಕ 01.11.2023 ರಂದು ಬಸವನಹಳ್ಳಿ ಗ್ರಾಮದ ಚೆನ್ನಮ್ಮ ರವರ ಮನೆಯ ಮುಂದೆ ಸಾರ್ವಜನಿಕ ರಸ್ತೆಯಲ್ಲಿ ಪಿರ್ಯಾದಿ ನಂದೀಶ್ ಇವರು ಹಾಜರಾಗಿದ್ದು, ಆರೋಪಿತರು ತನಗೆ ಹಲ್ಲೆ ಮಾಡಿದ್ದ ಸ್ಥಳ ಎಂದು ತೋರಿಸಿದ ಮೇರೆಗೆ ಪೊಲೀಸರು ನಿಪಿ-6 ರಂತೆ ಪಂಚನಾಮೆ ಮಾಡಿ ಒಂದು ಶರ್ಟ್ ಮತ್ತು ಬೀರ್ ಬಾಟಲ್ ವಶಪಡಿಸಿಕೊಂಡರು ಎಂದು ಸೂಚಿಸುವುದು ಸರಿಯಲ್ಲ. ಪಂಚನಾಮೆ ಕಾಲಕ್ಕೆ ಪೊಲೀಸರು ನಿಪಿ-7 ರಿಂದ ನಿಪಿ-11 ರಂತೆ ಪೊಟೋಗಳನ್ನು ತೆಗೆದಿದ್ದಾರೆ ಎಂದು ಸೂಚಿಸುವುದು ಸರಿಯಲ್ಲ. ಆ ಬಗ್ಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ "ನಾನು ಮೇಲ್ಕಂಡ ವಿಳಾಸದಲ್ಲಿ.........................ನೀಡಿದ ಹೇಳಿಕೆ." ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯನ್ನು **ನಿಪಿ-13** ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು- 1 ರಿಂದ 3 ನೇ ಆರೋಪಿತರ ಪರ ವಕೀಲರಾದ ಶ್ರೀ. ಕೆ.ಎ.ಕೆ.ಆರ್ ರವರಿಂದಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೊಡಗು-ಮಡಿಕೇರಿ.